## ವಿದ್ಯಾರಾಧನೆ



**ಚೀ**ನೀ ಯಾತ್ರಿಕನಾದ ಹುಯನ್‌ತ್ಸಾಂಗನು ಪ್ರಸಿದ್ಧ ವಿಶ್ವವಿದ್ಯಾನಿಲಯದಲ್ಲಿ ಕಲಿತು ತನ್ನ ಸ್ವದೇಶಕ್ಕೆ ಮರಳು ತ್ತಿದ್ದನು. ಅವನ ಕೆಲವು ವಿದ್ಯಾರ್ಥಿಗಳು ಕೂಡ ಅವನ ಸತ್ಸಂಗವನ್ನು ಪಡೆಯಲಿಕ್ಕಾಗಿ ಅವನೊಡನೆ ಹೊರಟಿದ್ದರು. ಅವರು ಸಮುದ್ರದಲ್ಲಿ ನೌಕೆಯಲ್ಲಿ ಸಾಗುತ್ತಿದ್ದರು. ಹವೆ ಕೆಟ್ಟು, ಬಿರುಗಾಳಿ ಹುಟ್ಟಿತು. ಆಗ ನೌಕೆಯ ನಾವಿಕನು ಹೀಗೆಂದ : " ನೌಕೆ ಹಗುರವಾದರೆ ಒಳ್ಳೆಯದು, ನಿಮ್ಮಲ್ಲಿರುವ ಭಾರವಾಗಿರುವ ಪುಸ್ತಕಗಳನ್ನು ಎಸೆದರೆ ಮಾತ್ರ ನಾವು ಸುರಕ್ಷಿತರಾಗಿ ದಡ ಮುಟ್ಟಬಲ್ಲೆವು."

ಪುಸ್ತಕಪ್ರಿಯರಾದ ಆ ಯಾತ್ರಿಕರು ದ್ವಂದ್ವದಲ್ಲಿ ಸಿಲುಕಿದರು. ಶಿಷ್ಯರೆಲ್ಲ ಸೇರಿ ತಮ್ಮ ಗುರುವಾದ ಹುಯೆನ್ ತ್ಸಾಂಗನಿಗೆ ಹೀಗೆ ವಿಜ್ಞಾಪನೆ ಮಾಡಿಕೊಂಡರು : "ಗುರುವೇ, ಈ ಪುಸ್ತಕಗಳು ಬರಿಯ ಪುಸ್ತಕಗಳಲ್ಲ. ಅವು ನಮ್ಮ ಚೀನಾ ದೇಶಕ್ಕೆ ಅತ್ಯವಶ್ಯಕವಾದ ಜ್ಞಾನಬಂಢಾರ. ಅದಕ್ಕಿಂದ ಅಮೂಲ್ಯವಾದುದೇನಲ್ಲ ನಮ್ಮ ಬಾಳು, ನಾವು ಹೊರಗೆ ಹಾರುತ್ತೇವೆ." ಜ್ಞಾನಪಿಪಾಸುಗಳೂ ಸ್ವದೇಶಪ್ರಿಯರೂ ಆದ ಆ ಯುವಕರು ತಾವೇ ಸಮುದ್ರಕ್ಕೆ ಧುಮುಕಿದರು. ಇದರ ಮೂಲಕ ಮಹಾತ್ಯಾಗವನ್ನೇ ಮಾಡಿದರು.